ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಪೊಲೀಸ್ ಸುಗ್ರೀವಾಜ್ಞೆಗಳು

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 18/10/2019

ಬಿಜೆಪಿಯ ವರದಿಯನ್ನು ಬಹಿಷ್ಕರಿಸುವ ಮಾಧ್ಯಮಗಳು | ಸ್ಪೀಕರ್ ವರದಿ ಪ್ರಶ್ನಾತೀತವೆನ್ನುತ್ತಿರುವ ನಾಯಕರು

ಮಾಧ್ಯಮ-ಸ್ಪೀಕರ್ ಕಿತ್ತಾಟ ಇಕ್ಕಟ್ಟಿನಲ್ಲಿ ಬಿಜೆಪಿ ಸರಕಾರ

18/10/19

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಧಾನಮಂಡಲ ಅಧಿವೇಶನದಿಂದ ಖಾಸಗಿ ಸುದ್ದಿವಾಹಿನಿ ಕ್ಯಾಮೆರಾಗಳನ್ನು ನಿರ್ಬಂಧಿಸಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ನಿರ್ಣಯ, ಇದೀಗ ಸರಕಾರ ಹಾಗೂ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಅ.10-12ರವರೆಗೆ ನಡೆದ ಚಳಿಗಾಲದ ಅಧಿವೇಶನದಲ್ಲಿ 'ಪ್ರಾಯೋಗಿಕ'ವಾಗಿ ಖಾಸಗಿ ಮಾಧ್ಯಮಗಳ ವಿಡಿಯೊ ಹಾಗೂ ಫೋಟೊ ಕ್ಯಾಮೆರಾಗಳನ್ನು ನಿರ್ಬಂಧಿಸಲಾಗಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸುದ್ದಿವಾಹಿನಿಗಳು, ಸರಕಾರದ ಹಾಗೂ ವಿಧಾನಮಂಡಲದ ಸುದ್ದಿಗಳನ್ನು ಬಹಿಷ್ಕರಿಸಿದವು. ವಾರ ಕಳೆದರೂ, ಬಿಜೆಪಿ ಸರಕಾರ ಅಥವಾ ಪಕ್ಷದ ಸುದ್ದಿಗಳನ್ನು ಪ್ರಸಾರ ಮಾಡದಿರುವುದು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಈಗಾಗಲೇ ಮಾಧ್ಯಮಗಳನ್ನು ನಿರ್ಬಂಧಿಸಿರುವ ಬಗ್ಗೆ ಪ್ರತಿಪಕ್ಷದ ನಾಯಕರು ಹೊರಗೆ ವಿರೋಧಿಸಿದರೂ, 'ಆಫ್ ದಿ ರೆಕಾರ್ಡ್' ಮಾತನಾಡುವಾಗ, ಇದೇ ಕಾನೂನು ಮುಂದುವರಿಯಲಿ ಎನ್ನುವ ಸಲಹೆಯನ್ನು ನೀಡಿದ್ದಾರಂತೆ. ಸ್ಪೀಕರ್ ಪರಮಾಧಿಕಾರ ಎನ್ನುವ ನೆಪವೊಡ್ಡಿ ಕೆಲ ಬಿಜೆಪಿ ನಾಯಕರು ಜಾರಿಕೊಳ್ಳುತ್ತಿದ್ದಾರೆ. ಆದರೆ ಇನ್ನು ಕೆಲವರು ಸ್ಪೀಕರ್ ಆದೇಶವನ್ನು ಸ್ವಾಗತಿಸಿದ್ದಾರೆ.



ಖಾಸಗಿ ಮಾಧ್ಯಮ ವರದಿಗಾರರು ಈಗಾಗಲೇ ಪಕ್ಷದ ಹಾಗೂ ಸಚಿವರ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದಾಗಲೆಲ್ಲ, ನಿರ್ಬಂಧವನ್ನು ತೆರವುಗೊಳಿಸಬೇಕೆಂಬ ಬೇಡಿಕೆಯನ್ನಿಡುತ್ತಾರೆ. ಆದರೆ ಬಹುತೇಕ ಬಿಜೆಪಿ ಸಚಿವರು, ವಿಧಾನಮಂಡಲ ಸ್ಪೀಕರ್ ಅವರ ಸುಪರ್ದಿಯಲ್ಲಿ ಬರಲಿದೆ. ಇದರಲ್ಲಿ ನಾವು ಮೂಗು ತೂರಿಸಲು ಶಿಷ್ಟಾಚಾರದಲ್ಲಿ ಅವಕಾಶವಿಲ್ಲ ಎಂದು ನುಣುಚಿಕೊಳ್ಳುತ್ತಿದ್ದಾರೆ.

ನಿರ್ಬಂಧ ತೆರವಿಗೆ ಮನವಿ:

ಇನ್ನು ಇದೇ ವಿಚಾರವಾಗಿ ಕುಮಾರಕೃಪಾ ಗೆಸ್ಟ್‌ಹೌಸ್‌ನಲ್ಲಿ ಪತ್ರಕರ್ತರ ನಿಯೋಗ ಸಚಿವ ಬಸವರಾಜ ಬೊಮ್ಮಾಯಿ ಹಾಗೂ ಸಿ.ಟಿ ರವಿ ಅವರನ್ನು ಭೇಟಿಯಾಗಿ ನಿರ್ಬಂಧವನ್ನು ತೆರವುಗೊಳಿಸುವಂತೆ ಮನವಿ ಮಾಡಿದರು. ಆದರೆ ಇಬ್ಬರು ಸಚಿವರು, ಈ ವಿಚಾರವಾಗಿ ವೈಯಕ್ತಿಕ ನಿಲುವು, ಸರಕಾರದ ನಿಲುವು ಹಾಗೂ ಪಕ್ಷದ ನಿಲುವು ಬೇರೆಯಾಗಿರಬಹುದು. ಖಾಸಗಿ ಕ್ಯಾಮೆರಾಗಳನ್ನು ಒಳಗೆ ಬಿಡಬೇಕೆ ಬೇಡವೇ ಎನ್ನುವುದನ್ನು ನಿರ್ಧರಿಸುವ ಅಧಿಕಾರ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗಿದ್ದು, ಇದರಲ್ಲಿ ಸರಕಾರ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ಈ ಬಗ್ಗೆ ಅನೌಪಚಾರಿಕವಾಗಿ ಕಾಗೇರಿ ಅವರೊಂದಿಗೆ ಚರ್ಚಿಸಿ, ಈ ಬಗ್ಗೆ ಹರಿಸುವ ವಿಶ್ವಾಸವನ್ನು ನೀಡಿದರು.



ಆಡಳಿತದಲ್ಲಿರುವಾಗ ಇದೇ ನಾಯಕರು ಮಾಧ್ಯಮವನ್ನು ನಿಯಂತ್ರಿಸಲು ಹೊರಟಿದ್ದರು. ಆದರೀಗ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಿದ್ದಾರೆ. ಆನೇಕರು ಬಹಿರಂಗವಾಗಿ ಮಾಧ್ಯಮಗಳಿಗೆ ಅವಕಾಶ ನೀಡಬೇಕು ಎನ್ನುತ್ತಿದ್ದರೂ, ಆಂತರಿಕವಾಗಿ ಸ್ಪೀಕರ್ ನಡೆಯನ್ನು ಸ್ವಾಗತಿಸಿದ್ದಾರೆ.

– ಸಿ.ಟಿ.ರವಿ, ಪ್ರವಾಸೋದ್ಯಮ ಸಚಿವ

ಸ್ಪೀಕರ್ ಕ್ರಮ ಸಮರ್ಥಿಸಿಕೊಂಡ ಕಾರಜೋಳ

ಇನ್ನು ಇದೇ ವಿಚಾರವಾಗಿ ಕಲಬುರಗಿಯಲ್ಲಿ ಮಾತನಾಡಿರುವ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ವಿಧಾನಸಭೆ ಅಧಿವೇಶನದಲ್ಲಿ ಮಾಧ್ಯಮಗಳ ಮೇಲೆ ನಿಷೇಧ ಹೇರಿರುವುದು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ನಿರ್ಧಾರವಾಗಿದೆ. ಅವರಿಗೆ ಈ ವಿಷಯದಲ್ಲಿ ಪರಮಾಧಿಕಾರವಿದೆ. ನಿಷೇಧ ಹೇರಿರುವುದು ಅವರ ವಿವೇಚನೆಗೆ ಬಿಟ್ಟದ್ದು. ಸ್ಪೀಕರ್ ವಿಚಾರ ಸಂಕಿರಣವೊಂದಕ್ಕೆ ಹೋದಾಗ ಆಲ್ಲಿ ವಿಚಾರ ಪ್ರಸ್ತಾಪವಾಗಿತ್ತು. ಮಾಧ್ಯಮಗಳನ್ನು ಕಲಾಪದಿಂದ ಹೊರಗಿಟ್ಟು ಸರಕಾರಿ ಚಾನೆಲ್ ಮೂಲಕ ಪ್ರಸಾರದ ವ್ಯವಸ್ಥೆ ಮಾಡಲಾಗಿತ್ತು. ಹೀಗಾಗಿ ಸ್ಪೀಕರ್ ಪರಮಾಧಿಕಾರಕ್ಕೆ ನಾವ್ಯಾರು ಪ್ರಶ್ನೆ ಮಾಡುವಂತಿಲ್ಲ. ಹಾಗಂತ ಮಾಧ್ಯಮಗಳನ್ನು ದೂರವಿಡುವ ಪ್ರಶ್ನೆಯೇ ಇಲ್ಲ ಎಂದರು.

ಪತ್ರಕರ್ತರ ವಾದವೇನು?

- ಈ ಹಿಂದಿನಂತೆ ವಿಧಾನಮಂಡಲ ಕಲಾಪ ಚಿತ್ರೀಕರಣಕ್ಕೆ ಅವಕಾಶ ನೀಡಬೇಕು.
- ಶಾಸಕರ ಭವನ, ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ಮಾಧ್ಯಮಗಳಿಗೆ ವಿಧಿಸಿರುವ ನಿರ್ಬಂಧ ತೆರವುಗೊಳಿಸಬೇಕು
- ವಿಧಾನಸೌಧ ಪ್ರವೇಶಕ್ಕಿರುವ ಹಲವು ಅಡೆತಡೆಗಳನ್ನು ನಿವಾರಿಸಬೇಕು.
- ಮಾನ್ಯತಾ ಪತ್ರ ಹೊಂದದ ಪತ್ರಕರ್ತರಿಗೂ ಅನುಕೂಲವಾಗುವಂತೆ ಕಾರ್ಡ್ ನೀಡಬೇಕು.